
ಮಾರಾಟವನ್ನು ಕೈವಶ ಮಾಡಿಕೊಂಡವರಿಗೆ ಮಾರುಕಟ್ಟೆಯಲ್ಲಿ ಪ್ರಾಮುಖ್ಯತೆಯೂ ಲಾಭವೂ ಇರುತ್ತಿತ್ತು. 19ನೇ ಶತಮಾನದ ಕಡೆಗೆ ಇಲ್ಲಿನ ಮರಗಳನ್ನು ಮಣ್ಣಿನೊಂದಿಗೆ ಸ್ಥಳಾಂತರ ಮಾಡಿದ ಮೇಲೆ, ಪ್ರಪಂಚದ ಇತರೆಡೆಗಳಲ್ಲೂ ಈ ಮಸಾಲೆಯನ್ನು ಬೆಳೆಯಲು ಸಾಧ್ಯವಾಯಿತು. ಜಾಯಿಕಾಯಿ ಜಾಪತ್ರೆಯಿಂದ ಪ್ರಾರಂಭವಾಗುವ ಈ ಕಥನ ವಿಸ್ತಾರವಾಗುತ್ತಾ, ನಮ್ಮ ಗ್ರಹಮಂಡಲದಲ್ಲಿರುವ ಬಿಕ್ಕಟ್ಟನ್ನೂ, ಅದು ನಮ್ಮ ದಿನನಿತ್ಯದ ಜೀವನವನ್ನು ಹೇಗೆ ತಾಗುತ್ತದೆಂದು ಅಮಿತಾವ್ ಯಶಸ್ವಿಯಾಗಿ ನಿರೂಪಿಸುತ್ತಾರೆ.

ಭೂಮಿಯನ್ನು ಮತ್ತು ಭೂಮಿಯಲ್ಲಿರುವ ಸಂಪನ್ಮೂಲಗಳನ್ನು ಮನುಷ್ಯ ತನ್ನ ಅವಶ್ಯಕತೆಗನುಸಾರವಾಗಿ ಪಳಗಿಸಿಕೊಳ್ಳುತ್ತಾ ಮುಂದುವರೆದಂತೆ, ನಿಸರ್ಗದ ಜೊತೆಗಲ್ಲದೇ, ನಿಸರ್ಗದ ಜೊತೆ ಕಾದಾಡುತ್ತಾ ಬೆಳೆದದ್ದನ್ನು ‘ಟೆರ್ರಾಫೋರ್ಮಿಂಗ್’ ಎಂದು ಕರೆಯುತ್ತಾರೆ. (ಈ ಹೆಸರು ಅಮಿತಾವ್ ಕೊಟ್ಟದ್ದಲ್ಲ.) ಆದರೆ ಮಾನವ ಮಾತ್ರವಲ್ಲ, ಮಾನವನ ಜೊತೆಗೆ ಇದ್ದ ಸಾಕುಪ್ರಾಣಿಗಳು, ಮತ್ತು ಅವುಗಳ ಅವಶ್ಯಕತೆಗಳೂ ಕಾಡುಗಳನ್ನು ಸಮತಟ್ಟುಮಾಡಿ ಹುಲ್ಲುಗಾವಲುಗಳು ಬೆಳೆವಂತೆ ಮಾಡಿದವು. ಬಂಡಾ ದ್ವೀಪದ ವಾಸಿಗಳಿಗಾಗಲೀ, ಅಮೆರಿಕದಲ್ಲಿ ಬಂದು ನೆಲೆಸಿ ಮೂಲ ನಿವಾಸಿಗಳನ್ನು ಅಂಚಿಗಟ್ಟಿದ ವಲಸೆಗಾರರಾಗಲೀ ನಿಸರ್ಗದ ಜೊತೆಯಾಗಿ ಬೆರೆತು ನಿಲ್ಲಲಿಲ್ಲ. ಈ ಟೆರ್ರಾಫೋರ್ಮಿಂಗ್‌ಗೆ ಪೂರಕವಾಗಿ ನಿಂತದ್ದು ಗಾಯಾ (GAIA) ಎನ್ನುವ ಪ್ರತಿಪಾದನೆ ಮತ್ತು ವಾದ. ಈ ವಾದದ ಪ್ರಕಾರ, ಭೂಮಿಯ ಸಂಪನ್ಮೂಲಗಳನ್ನು ಬಳಸಿಕೊಳ್ಳುವುದರಿಂದ ಭೂಮಿ ಮತ್ತು ಪರಿಸರದ ಸಮತೋಲನದಲ್ಲಿ ಗಮನಾರ್ಹ ಏರುಪೇರಾಗುವುದಿಲ್ಲ. ಬದಲಿಗೆ ಭೂಮಿ ತನ್ನನ್ನೇ ತಾನು ಚಿಕಿತ್ಸೆಗೊಳಪಡಿಸಿ ಗುಣಮುಖವಾಗುತ್ತದೆ ಎಂದು ಹೇಳಲಾಗಿತ್ತು. ಈ ವಾದದಲ್ಲಿ ಪರಿಸರವನ್ನು ಇಟ್ಟಾಡಲು ಒಂದು ಘನವಾದ ವಾದಸರಣಿ ಮತ್ತು ಪಾಪಪ್ರಜ್ಞೆಯಿಂದ ಮುಕ್ತಿ ಎರಡೂ ಸಿಕ್ಕಿತ್ತು.

ಅಮಿತಾವ್ ನಮ್ಮ ಪರಿಸರನಾಶದ ಬಗ್ಗೆ ಬರೆಯುತ್ತಲೇ ಅದು ನಮ್ಮನ್ನು ಹೇಗೆ ನೇರವಾಗಿ




ತಟ್ಟುತ್ತದೆ ಎನ್ನುವುದನ್ನೂ ನಿರೂಪಿಸುತ್ತಾರೆ. ಕೋವಿಡ್ ಕಾಲದಲ್ಲಿ ಈ ಪುಸ್ತಕವನ್ನು ಬರೆಯುತ್ತಿರುವ ಸಂದರ್ಭಕ್ಕೆ ಪಶ್ಚಿಮ ಬಂಗಾಲದಲ್ಲಿ ಅಂಫನ್ ತೂಫಾನು ಬರುವ ಪೂರ್ವಸೂಚನೆ ಅವರಿಗೆ ಬರುತ್ತದೆ. ಅಮಿತಾವ್ ಅಮೆರಿಕದಲ್ಲಿದ್ದಾರೆ. ಅವರ ತಾಯಿ ಅನಾರೋಗ್ಯದೊಂದಿಗೆ ಚಿಕಿತ್ಸಕರ ಸಹಾಯದಿಂದ ಆಮ್ಲಜನಕದ ಅವಶ್ಯಕತೆಯೊಂದಿಗೆ ಬಂಗಾಲದಲ್ಲಿದ್ದಾರೆ. ಕೋವಿಡ್ ವೈರಾಣುವಿನ ಜೊತೆಗೆ ಸೆಣೆಸುತ್ತಿರುವಾಗಲೇ ಪರಿಸರದ ಪ್ರಕೋಪವನ್ನೂ ತಾಳಬೇಕು. ಇದು ಸರಳವಾದ ಮಾತಲ್ಲ. ಯಾಕೆಂದರೆ, ಪರಿಸರವನ್ನು ಒಂದು ವ್ಯಾವಹಾರಿಕ ಹಿತಾಸಕ್ತಿಯ ದೃಷ್ಟಿಯಿಂದ ನಾವು ನೋಡುತ್ತೇವೆ. ಪರಮಾಣು ಪ್ರಸರಣವನ್ನು ತಡೆಯುವ ಮಾತುಕತೆಯಲ್ಲಿ ಸೈನ್ಯಾಧಿಕಾರಿಗಳು ಹೇಳುವ ಈ ಮಾತು ಮಾರ್ಮಿಕವಾದದ್ದು. “ದೇಶವನ್ನು ರಕ್ಷಿಸುವ ಜವಾಬ್ದಾರಿ ನಮ್ಮದು. ಪರಿಸರ ರಕ್ಷಣೆ ನಮ್ಮ ಕೆಲಸವಲ್ಲ”, ಇದೇ ವಾದಸರಣಿಯನ್ನು ಹವಾಮಾನ ಸಮತೋಲನದ ಪತನದ ಚರ್ಚೆಗೆ ಕರೆಯುವ ಶೃಂಗಸಭೆಗಳಲ್ಲೂ ಕಾಣಬಹುದು. ವಿಕಸಿತ ರಾಷ್ಟ್ರಗಳು ಈಗಾಗಲೇ ಪರಿಸರನಾಶವನ್ನು ಮಾಡಿ